(ಇಂದು ದಿನಾಂಕಃ **07-01-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದಃ**

ಜಮೀನು ಸರ್ವೇ ನಂಃ37/3, 37/4 ಹಾಗೂ 37/5 ಗಳ ಮೂಲ ಸರ್ವೇ ನಂಃ 37/1 ಎಂದರೆ ಸರಿ. ದಿನಾಂಕಃ17-06-2002 ರಂದು ನಾವು ಸದರಿ ಜಮೀನಿನ ಪೈಕಿ 2 ಗುಂಟೆ ಜಮೀನನ್ನು ಯಲ್ಲಪ್ಪ ವೀರಪ್ಪ ನಾಯ್ಕಾರ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಂತರ ಸದರಿ ಜಮೀನು ಸರ್ವೇ ನಂಃ 37/3 ಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ಜಮೀನಿನ ಪೈಕಿ 2 ಗುಂಟೆ ಜಮೀನನ್ನು ಹನಮಪ್ಪ ಭೀಮಪ್ಪ ಜಾಡದ ರವರಿಗೆ ದಿನಾಂಕಃ 17-06-2002 ರಂದು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಂತರ ಸದರಿ ಜಮೀನು ಸರ್ವೇ ನಂಃ 37/4 ಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ಜಮೀನಿನ ಪೈಕಿ 1 ಗುಂಟೆ ಜಮೀನನ್ನು ಸಿದ್ಧರಾಮಯ್ಯ, ಪ್ರಮೋದಯ್ಯ ರವರಿಗೆ ದಿನಾಂಕಃ 17-06-2002 ರಂದು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಂತರ ಸದರಿ ಜಮೀನು ಸರ್ವೇ ನಂಃ 37/5 ಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಸದರಿ ಎಲ್ಲಾ ಖರೀದಿದಾರರನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಸದರಿ ಜಮೀನು ಸರ್ವೇ ನಂಃ37/1 ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಖರೀದಿ ಪತ್ರಗಳಿಗೆ 1 ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಅಂಶಗಳನ್ನು 7 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಊರಿಗೆ ಹೊಂದಿಕೊಂಡ ಜಮೀನು ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನು ಒಟ್ಟು ಕ್ಷೇತ್ರ 12 ಎಕರೆ 9 ಗುಂಟೆ ಎಂದರೆ ಸರಿ.

2. ನಮ್ಮ ತಂದೆಗೆ ಹನಮರಡ್ಡಿ, 3 ನೇ ಪ್ರತಿವಾದಿ ಗಂಡು ಮಕ್ಕಳಿರುತ್ತಾರೆ ಎಂದರೆ ಸರಿ. ಊರಿನಲ್ಲಿ ನಮ್ಮಗಳ ನಡುವೆ ಹಿರಿಯರ ಸಮಕ್ಷಮ ಅಪ್ಪಾತ್ ಪಾಲು ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದಲ್ಲಿ ನನಗೆ, ವಾದಿಯರಿಗೆ, 1, 2 ಹಾಗೂ 4 ನೇ ಪ್ರತಿವಾದಿಯರಿಗೆ ದಕ್ಷಿಣ ಭಾಗದ 6 ಎಕರೆ ಜಮೀನನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 3, 5 ರಿಂದ 7 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯ ಉತ್ತರದ 6 ಎಕರೆ 9 ಗುಂಟೆ ಜಮೀನು, ಸರ್ವೇ ನಂಃ 130/2, 162/1 ಬಿ ಹಾಗೂ

163/2 ಬಿ ಗಳನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮಗಳ ಪಾಲಿಗೆ ಬಂದಿದ್ದ ಜಮೀನುಗಳಲ್ಲಿ ನಾವು ಕಬ್ಜಾದಲ್ಲಿವೆ ಎಂದರೆ ಸಾಕ್ಷಿಯು ನಾವೆಲ್ಲರೂ ಸೇರಿ ಸಂಪೂರ್ಣ ಜಮೀನಿನಲ್ಲಿ ಕಬ್ಜಾದಲ್ಲಿವೆ ಎಂದು ನುಡಿದಿರುತ್ತಾರೆ. ನಾನು ಹಾಗೂ 4 ನೇ ಪ್ರತಿವಾದಿ ಮದುವೆಯಾಗಿ ನಮ್ಮಗಳ ಗಂಡಂದಿರ ಮನೆಗಳಲ್ಲಿ ವಾಸವಿದ್ದೇವೆ. 2 ನೇ ಪ್ರತಿವಾದಿಯ ವಿವಾಹವಾಗಿರುವುದಿಲ್ಲ. 2 ನೇ ವಾದಿ ಹಾಗೂ 2 ನೇ ಪ್ರತಿವಾದಿ ತಂದೆಯ ಮನೆಯಲ್ಲಿ ವಾಸವಿದ್ದಾರೆ. ಸದರಿ ಅಂಶಗಳನ್ನು ವಾದಪತ್ರದಲ್ಲಿ ಬರೆಸಿರುತ್ತೇನೆ. ಸದರಿ ಅಂಶಗಳನ್ನು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲು ವಿಭಾಗದ ಪ್ರಕಾರ ಹಣಕಾಸಿನ ತೊಂದರೆಯಿಂದಾಗಿ ಪಹಣಿ ಪತ್ರಿಕೆಯಲ್ಲಿ ಹೆಸರುಗಳು ನಮೂದಾಗಿರುವುದಿಲ್ಲ ಎಂದರೆ ಸರಿ. ನಾವು ಮಾರಾಟ ಮಾಡಿದ ಜಮೀನುಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನಾವು ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮಾರಾಟ ಮಾಡಿದ ಜಮೀನುಗಳ ಬಗ್ಗೆ ವಾದಪತ್ರದಲ್ಲಿ ಬರೆಸಿರುತ್ತೇನೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಜಮೀನಿನಲ್ಲಿ 6 ಗುಂಟೆ ಜಮೀನು ನೀರಾವರಿ ಇಲಾಖೆಯಿಂದ ಭೂ ಸ್ವಾಧೀನವಾಗಿದೆ ಎಂದರೆ ಸರಿ. ನಮ್ಮಗಳ ನಡುವೆ ಪಾಲು ವಿಭಾಗವಾಗಿದ್ದರೂ ಸಹ ಪಹಣಿ ಪತ್ರಿಕೆಯಲ್ಲಿ ನಮ್ಮ ಹೆಸರು ದಾಖಲೆ ಇರುವುದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**